**ಸಿ.ಸಿ.ನಂ.: 1447/2025**

ಪಿ.ಡಬ್ಲ್ಯೂ:1

(ಇಂದು ದಿನಾಂಕಃ **20–11–2025** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**<u>ಪಾಟೀ ಸವಾಲು –ಆರೋಪಿ ಪರ ಶ್ರೀ. ರಂಜನ ನಾಯ್ಕ ವಕೀಲರಿಂದ</u>**

1. ಆರೋಪಿತನಿಗೆ ಈ ಪ್ರಕಣದ ಸಾಲವನ್ನು ನೀಡುವ ಸಂದರ್ಭದಲ್ಲಿ ನಾನು ಫಿರ್ಯಾದಿ ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರಲಿಲ್ಲ ಎಂದರೆ ಸರಿ. ನನಗೆ ಈ ಪ್ರಕರಣದ ಕುರಿತಾಗಿ ವಯಕ್ತಿಕ ಮಾಹಿತಿ ಇಲ್ಲ ಎಂದರೆ ದಾಖಲಾತಿಗಳ ಆಧಾರದ ಮೇಲೆ ನಾನು ಮಾಹಿತಿಯನ್ನು ಪಡೆದುಕೊಂಡು ಬಂದಿರುತ್ತೇನೆ ಎಂದು ಸಾಕ್ಷಿಯು ನುಡಿಯುತ್ತಾರೆ.

2. ನಿ.ಪಿ.7 ರಿಂದ 11 ನ್ನು ಯಾರು ಬರೆದರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ 7 ರಿಂದ 11 ನಾವು ಆರೋಪಿತರಿಗೆ ಸಾಲವನ್ನು ನೀಡಿದ ಕುರಿತಾಗಿ ಅಧಿಕೃತ ದಾಖಲಾತಿಗಳು ಎಂದರೆ ಸರಿ. ನಿಪಿ 7 ರಿಂದ 11 ಕ್ಕೆ ಯಾರು ಸಹಿಯನ್ನು ಮಾಡಿದ್ದಾರೆ ಎಂಬ ಬಗ್ಗೆ ನನಗೆ ತಿಳಿದಿಲ್ಲ. ನಿಪಿ 7 ರಲ್ಲಿ ಇರುವ ಸಾಲದ ಉದ್ದೇಶವು ಆರೋಪಿತನು ಆತನ ಮಗಳ ವಿದ್ಯಾಭ್ಯಾಸಕ್ಕಾಗಿ ಪಡೆದುಕೊಂಡಿರುತ್ತಾನೆ. ಆರೋಪಿತನು ವಿವಾಹಿತನೋ ಅವಿವಾಹಿತನೋ ಎಂಬ ಬಗ್ಗೆ ನನಗೆ ತಿಳಿದಿಲ್ಲ. ಆರೋಪಿತನು ವಿವಾಹಿತನು ಅಥವಾ ಅವಿವಾಹಿತನು ಎಂಬ ಬಗ್ಗೆ ಸಾಲದ ಉದ್ದೇಶಕ್ಕಾಗಿ ದಾಖಲಾತಿ ಅವಶ್ಯಕವಾಗಿರುತ್ತದೆ ಎಂದರೆ ಸಾಕ್ಷಿಯು ರೇಶನ ಕಾರ್ಡನ್ನು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

**ಸಿ.ಸಿ.ನಂ.: 1447/2025**

ಪಿ.ಡಬ್ಲ್ಯೂ: 1

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ